# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು – ೫೭೦ ೦೦೬**

**ದಿನಾಂಕ: 15.03.2023 ರಂದು ಸಂಜೆ 4:30 ಗಂಟೆಗೆ** ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾನ್ಯ ಕುಲಪತಿಗಳ ಕಚೇರಿ ಸಭಾಂಗಣದಲ್ಲಿ ನಡೆದ 25ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯ ನಡಾವಳಿ.

| **ಉಪಸ್ಥಿತರು** | |
|---|---|
| **ಪ್ರೊ. ಶರಣಪ್ಪ ವಿ. ಹಲಸೆ**<br>ಮಾನ್ಯ ಕುಲಪತಿಗಳು ಹಾಗು ಅಧ್ಯಕ್ಷರು<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. | **ಪ್ರೊ. ಕೆ.ಎಲ್.ಎನ್. ಮೂರ್ತಿ**<br>ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ<br>ಶೈಕ್ಷಣಿಕ ಮಂಡಳಿ,<br>ಕರಾಮುವಿ, ಮೈಸೂರು. |
| **ಡಾ. ನಿರಂಜನ್ ರಾಜ್ ಎಸ್.**<br>ಡೀನ್ (ಶೈಕ್ಷಣಿಕ) (ಕಾ/ಭಾ)<br>ಕರಾಮುವಿ, ಮೈಸೂರು | **ಡಾ. ಎ. ಖಾದರ್ ಪಾಷ**<br>ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು |
| **ಡಾ. ಕೆ.ಬಿ. ಪ್ರವೀಣ**<br>ಕುಲಸಚಿವರು (ಪರೀಕ್ಷಾಂಗ)<br>ಕರಾಮುವಿ, ಮೈಸೂರು. | **ಪ್ರೊ. ಎಂ. ರಾಮನಾಥಂ ನಾಯ್ಡು**<br>ಡೀನ್ (ಅಧ್ಯಯನ ಕೇಂದ್ರಗಳು),<br>ಕರಾಮುವಿ, ಮೈಸೂರು. |
| **ವಿಶೇಷ ಆಹ್ವಾನಿತರು** | |
| **ಡಾ. ನಿರಂಜನ್ ರಾಜ್**<br>CIQA **ನಿರ್ದೇಶಕರು**<br>ಕರಾಮುವಿ, ಮೈಸೂರು. | – |
| **ವಿವಿಧ ನಿಕಾಯಗಳ (ಸ್ಕೂಲ್) ಪ್ರಭಾರ ನಿರ್ದೇಶಕರು** | |
| **ಡಾ. ಲಕ್ಷ್ಮೀ .ಎನ್** | ಶಿಕ್ಷಣ ನಿಕಾಯ |
| **ಡಾ. ನಿರಂಜನ್ ರಾಜ್ ಎಸ್.** | ವಿಜ್ಞಾನ ನಿಕಾಯ |
| **ಡಾ. ಹೆಚ್. ರಾಜೇಶ್ವರಿ** | ನಿರ್ವಹಣಾಶಾಸ್ತ್ರ ನಿಕಾಯ |
| **ಡಾ. ಮಹೇಶ ವಿ.** | ವಾಣಿಜ್ಯ ನಿಕಾಯ |
| **ಡಾ. ಆರ್.ಹೆಚ್. ಪವಿತ್ರ** | ಸಮಾಜ ವಿಜ್ಞಾನ ನಿಕಾಯ |

ಶೈಕ್ಷಣಿಕ ಮಂಡಳಿ ಸಭೆಯ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳನ್ನು ಮಾನ್ಯ ಕುಲಸಚಿವರು ಸ್ವಾಗತಿಸುವುದರೊಂದಿಗೆ ಸಭೆಯು ಪ್ರಾರಂಭವಾಯಿತು. ಮಾನ್ಯ ಕುಲಸಚಿವರು ಅಧ್ಯಕ್ಷರ ಸೂಚನೆಯಂತೆ 25ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಯ ಕಾರ್ಯಸೂಚಿಯನ್ನು ವಿಷಯವಾರು ಸಭೆಯಲ್ಲಿ ಮಂಡಿಸಿದರು.

ಕುಲಸಚಿವರು                ಕುಲಪತಿಗಳು

**ವಿಷಯ ಸಂಖ್ಯೆ : 25.01**

**ವಿಷಯ : SLM ಗಳ ಮುದ್ರಣ ಸ್ವರೂಪ ವಿನ್ಯಾಸಗೊಳಿಸುವ ಬಗೆಗೆ.**

********

ವಿಶ್ವವಿದ್ಯಾನಿಲಯದಲ್ಲಿ CBCS ಅನ್ನು ಅಳವಡಿಸಿಕೊಂಡಿರುವ ಶಿಕ್ಷಣಕ್ರಮಗಳಿಗೆ ಹೊಸದಾಗಿ ಸಿದ್ಧಗೊಂಡಿರುವ SLM ಗಳ ಮುದ್ರಣ ಸ್ವರೂಪವನ್ನು ವಿನ್ಯಾಸಗೊಳಿಸುವ ಸಂಬಂಧ ದಿನಾಂಕ: 22.12.2022 ರಂದು ಸಮಿತಿ ರಚಿಸಿ ಕಚೇರಿ ಆದೇಶ ಹೊರಡಿಸಲಾಗಿರುತ್ತದೆ. ಸದರಿ ಸಮಿತಿಯು ದಿನಾಂಕ: 23.01.2023 ರಂದು ವಿಸ್ತೃತವಾಗಿ ಚರ್ಚಿಸಿ, ನಡಾವಳಿಯನ್ನು ಸಲ್ಲಿಸಿರುತ್ತಾರೆ. ಸದರಿ ಸಮಿತಿಯ ನಡಾವಳಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ, ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ಸಮಿತಿಯ ನಡಾವಳಿಯನ್ನು ಅನುಮೋದಿಸಲಾಯಿತು.**

*****

**ವಿಷಯ ಸಂಖ್ಯೆ: 25.02**

**ವಿಷಯ: ವಿಶ್ವವಿದ್ಯಾನಿಲಯದಲ್ಲಿ ಸಿ.ಬಿ.ಸಿ.ಎಸ್ ಸ್ಕೀಮ್‌ನ ಅಂಕಪಟ್ಟಿ ವಿನ್ಯಾಸವನ್ನು ಸಿದ್ಧಪಡಿಸುವ ಸಂಬಂಧ ಪರೀಕ್ಷಾ ವಿಭಾಗದಲ್ಲಿ ನಡೆದ ಸಮಿತಿ ಸಭೆಯ ನಡಾವಳಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ಅನುಮೋದನೆ ಕೋರಿ.**

*****

ವಿಶ್ವವಿದ್ಯಾನಿಲಯದ 2021–22ನೇ ಶೈಕ್ಷಣಿಕ ಸಾಲಿನ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳಲ್ಲಿ ಸಿ.ಬಿ.ಸಿ.ಎಸ್ ಮಾದರಿಯ ಶಿಕ್ಷಣ ಕ್ರಮವನ್ನು ಅಳವಡಿಸಿಕೊಂಡು ಪರೀಕ್ಷಾ ಕಾರ್ಯಗಳನ್ನು ನಡೆಸಿರುತ್ತದೆ. ಪ್ರಸ್ತುತ ಭೌತಿಕ/ಪ್ರಾಯೋಗಿಕ/ಆಂತರಿಕ ಅಂಕಗಳನ್ನು ನಮೂದಿಸಿ ಫಲಿತಾಂಶ ಪ್ರಕಟಿಸಲಾಗಿದ್ದು, ಅಂಕಪಟ್ಟಿಯ ವಿನ್ಯಾಸವನ್ನು ಸಿದ್ಧಪಡಿಸುವ ಸಂಬಂಧ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಮಿತಿ ರಚಿಸಲಾಗಿದ್ದು, ದಿನಾಂಕ;31.01.2023 ರಂದು ಪರೀಕ್ಷಾ ವಿಭಾಗದ ಸಭಾ ಕೊಠಡಿಯಲ್ಲಿ ಡೀನ್(ಶೈಕ್ಷಣಿಕ) ರವರ ಅಧ್ಯಕ್ಷತೆಯಲ್ಲಿ ಸಮಿತಿ ಸದಸ್ಯರುಗಳ ಸಮ್ಮುಖದಲ್ಲಿ ಸಭೆ ನಡೆಸಿದ್ದು, ಸದರಿ ಸಮಿತಿಯು ಈ ಬಗ್ಗೆ ವಿವರವಾದ ವರದಿಯನ್ನು ಸಿದ್ದಪಡಿಸಿ ಸಲ್ಲಿಸಿರುತ್ತದೆ. ಸಿದ್ಧಪಡಿಸಲಾಗಿರುವ ಈ ವರದಿಯನ್ನು ದಿನಾಂಕ;15–03–2023 ಶೈಕ್ಷಣಿಕ ಮಂಡಳಿ ಸಭೆಗೆ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ಸಮಿತಿಯ ನಡಾವಳಿಯನ್ನು ಅನುಮೋದಿಸಲಾಯಿತು.**

*****

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 25.03**

**ವಿಷಯ: ಪರೀಕ್ಷಾ ವಿಭಾಗದ ವಿದ್ಯಾರ್ಥಿಗಳ ಕುಂದುಕೊರತೆಗಳ ಸಲಹಾ ಸಮಿತಿಯ ನಡಾವಳಿಯನ್ನು ಮುಂದಿನ ಶೈಕ್ಷಣಿಕ ಮಂಡಳಿ ಸಭೆಯ ಒಪ್ಪಿಗೆ ಕೋರಿ.**

*****

ಪರೀಕ್ಷಾ ವಿಭಾಗದಲ್ಲಿ ವಿದ್ಯಾರ್ಥಿಗಳ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ, ಸಲಹಾ ಸಮಿತಿ ಸಭೆಯು ದಿನಾಂಕ:13.2.2023ರಂದು ಮಾನ್ಯ ಕುಲಸಚಿವರು(ಪರೀಕ್ಷಾಂಗ)ರವರ ಅಧ್ಯಕ್ಷತೆಯಲ್ಲಿ ನಡೆದಿರುತ್ತದೆ. ಸಭೆಯಲ್ಲಿ ಮಂಡಿಸಲಾಗಿದ್ದ, ಸ್ನಾತಕ ಪದವಿ 07 ವಿದ್ಯಾರ್ಥಿಗಳ ವಿಷಯಗಳು, ಸ್ನಾತಕೋತ್ತರ ಪದವಿ 07 ವಿದ್ಯಾರ್ಥಿಗಳ ವಿಷಯಗಳು ಹಾಗೂ  ಡಿಜಿಟಲ್ ಮೌಲ್ಯಮಾಪನ 02 ವಿದ್ಯಾರ್ಥಿಗಳ ವಿಷಯಗಳಿಗೆ ಸಂಬಂಧಿಸಿದಂತೆ, ಸಮಿತಿಯು ತೆಗೆದುಕೊಂಡಿರುವ ತೀರ್ಮಾನದ ಶಿಫಾರಸ್ಸಿನ ನಡಾವಳಿಯನ್ನು ಶೈಕ್ಷಣಿಕ ಮಂಡಳಿ ಸಭೆಯ ತೀರ್ಮಾನ ಮತ್ತು ಅನುಮೋದನೆಗಾಗಿ ವಿಷಯ ಮಂಡಿಸಿದೆ.

**ತೀರ್ಮಾನ: ಸಲಹಾ ಸಮಿತಿಯ ನಡಾವಳಿಯನ್ನು ಅನುಮೋದಿಸಲಾಯಿತು.**

*****

**ವಿಷಯ ಸಂಖ್ಯೆ: 25.04**

**ವಿಷಯ: ಶಿಕ್ಷಣಶಾಸ್ತ್ರ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿರುವ ಬಗ್ಗೆ.**
**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:08.02.2023**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶಿಕ್ಷಣಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ ಡಾ. ಲಕ್ಷ್ಮಿ ಎನ್. ಪ್ರಾಧ್ಯಾಪಕರು, ಇವರನ್ನು ವಿಭಾಗದ ಅಧ್ಯಕ್ಷರ ಹುದ್ದೆಯಿಂದ ಬಿಡುಗಡೆಗೊಳಿಸಿ, ಸುಗಮ/ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಟಿಯಿಂದ ಶಿಕ್ಷಣಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಶರಣಮ್ಮ ಆರ್., ಇವರನ್ನು ತಕ್ಷಣದಿಂದ ಜಾರಿಗೆ ಬಂದಂತೆ (ದಿನಾಂಕ: 08.02.2023 ಅಪರಾಹ್ನ) ವಿಭಾಗದ ಅಧ್ಯಕ್ಷರನ್ನಾಗಿ ಮುಂದಿನ ಆದೇಶದವರೆಗೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಆದೇಶ ಹೊರಡಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ: ಜೇಷ್ಠತಾ ಪಟ್ಟಿ ಹಾಗೂ ಕಡತವನ್ನು ಮತ್ತೊಮ್ಮೆ Review ಮಾಡಿ ಅದರಂತೆ ಕ್ರಮವಹಿಸುವುದು ಎಂದು ತೀರ್ಮಾನಿಸಲಾಯಿತು.**

*****

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 25.05**

**ವಿಷಯ: ಸಮಾಜಶಾಸ್ತ್ರ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿರುವ ಬಗ್ಗೆ.**
**ಉಲ್ಲೇಖ: ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:08.02.2023**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಮಾಜಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷರಾಗಿದ್ದ ಡಾ. ಜಯಪಾಲ್ ಹೆಚ್.ಆರ್, ಸಹಾಯಕ ಪ್ರಾಧ್ಯಾಪಕರು, ಇವರನ್ನು ವಿಭಾಗದ ಅಧ್ಯಕ್ಷರ ಅವಧಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸುಗಮ/ ಆಡಳಿತಾತ್ಮಕ/ ಶೈಕ್ಷಣಿಕ ಹಿತದೃಷ್ಠಿಯಿಂದ ಸಮಾಜಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಸಂತೋಷ ನಾಯಕ್ ಆರ್. ಸಹಾಯಕ ಪ್ರಾಧ್ಯಾಪಕರು, ಇವರನ್ನು ತಕ್ಷಣದಿಂದ ಜಾರಿಗೆ ಬಂದಂತೆ (ದಿನಾಂಕ: 08.02.2023 ಅಪರಾಹ್ನ) ವಿಭಾಗದ ಅಧ್ಯಕ್ಷರನ್ನಾಗಿ ಮುಂದಿನ ಆದೇಶದವರೆಗೆ ಮಾನ್ಯ ಕುಲಪತಿಗಳ ಅನುಮೋದನೆಯಂತೆ ನೇಮಿಸಿ ಆದೇಶ ಹೊರಡಿಸಲಾಗಿದೆ. ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಅನುಸಮರ್ಥನೆಗಾಗಿ ಮಂಡಿಸಿದೆ.

**ತೀರ್ಮಾನ : ಅನುಮೋದಿಸಲಾಯಿತು.**

ಕುಲಸಚಿವರು ಕುಲಪತಿಗಳು

*********

**ವಿಷಯ ಸಂಖ್ಯೆ: 25.06**

**ವಿಷಯ: MA (JMC) CBCS ಪರಿಷ್ಕೃತ ಪಠ್ಯಕ್ರಮಕ್ಕೆ ಅನುಮೋದನೆ ನೀಡುವ ಬಗ್ಗೆ.**

*****

ಕರಾಮುವಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿ ಪದವಿ ಕಾರ್ಯಕ್ರಮಕ್ಕೆ CBCS ಸೆಮಿಸ್ಟರ್ ಪದ್ಧತಿಯಲ್ಲಿ ಆರಂಭಿಸಿರುವ ಹಿನ್ನೆಲೆಯಲ್ಲಿ 23ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ 23.03ರ ವಿಷಯವನ್ನು ಮಂಡಿಸಲಾಗಿದ್ದು, ಸದರಿ ಸಭೆಯ ತೀರ್ಮಾನದಂತೆ, ಪರಿಷ್ಕೃತ ಪಠ್ಯಕ್ರಮಕ್ಕೆ ತಾತ್ವಿಕ ಅನುಮೋದನೆ ನೀಡಿದ್ದ ಹಿನ್ನೆಲೆಯಲ್ಲಿ ಪರಿಷ್ಕೃತ ಪಠ್ಯಕ್ರಮವನ್ನು ಸಿದ್ದಪಡಿಸಿ ಪ್ರಸ್ತುತ ಶೈಕ್ಷಣಿಕ ಮಂಡಳಿಯ ಅನುಮೋದನೆಗೆ ಮರುಮಂಡಿಸಿದೆ.

**ತೀರ್ಮಾನ : ಅನುಮೋದಿಸಲಾಯಿತು.**

*********

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 25.07**

**ವಿಷಯ: ಪ್ರಸಾರಂಗ ವಿಭಾಗದ ಬೈಲಾವನ್ನು 25ನೇ ವಿಶೇಷ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸುವ ಬಗೆಗೆ.**

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಸಾರಂಗ ವಿಭಾಗಕ್ಕೆ ಪ್ರತ್ಯೇಕ ಪರಿನಿಯಮಗಳು ಇಲ್ಲದಿರುವ ಕಾರಣ ಮಾನ್ಯ ಕುಲಪತಿಗಳ ಸೂಚನೆಯಂತೆ ವಿಸ್ತೃತವಾಗಿ ಪ್ರಸಾರಂಗದ ಬೈಲಾವನ್ನು ಸಿದ್ಧಪಡಿಸಿದ್ದು ಇದರ ಸಂಬಂಧ ಮಾನ್ಯ ಕುಲಪತಿಗಳು ದಿನಾಂಕ:08.03.2023 ರಂದು ಬೈಲಾದ ಕರಡು ಪ್ರತಿಯನ್ನು ಕಡತ ಸಂಖ್ಯೆ ಕರಾಮುವಿ/ಪ್ರಸಾರವಿ01/63/2022–23ದಲ್ಲಿ ಅನುಮೋದನೆಯನ್ನು ನೀಡಿದ್ದು ಅದರಂತೆ ಬೈಲಾದ ಕರಡನ್ನು ಸದರಿ ಶೈಕ್ಷಣಿಕ ಮಂಡಳಿ ಸಭೆಯ ಅವಗಾಹನೆಗೆ ತರುತ್ತಾ, ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ತೀರ್ಮಾನ : ಅನುಮೋದಿಸಲಾಯಿತು.**

*********

**ವಿಷಯ ಸಂಖ್ಯೆ: 25.08**

ವಿಷಯ: 2022–23ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ಎಂ.ಬಿ.ಎ ಪ್ರವೇಶಾತಿಗೆ Online ಮೂಲಕ ಪ್ರವೇಶ ಪರೀಕ್ಷೆ ನಡೆಸಿರುವುದರ ಬಗ್ಗೆ.

*****

2022–23ನೇ ಶೈಕ್ಷಣಿಕ ಸಾಲಿನ ಜನವರಿ ಆವೃತ್ತಿಯಲ್ಲಿ ಎಂ.ಬಿ.ಎ. ಪ್ರವೇಶಾತಿಗೆ Online ಮುಖಾಂತರ ಪ್ರವೇಶ ಪರೀಕ್ಷೆಯನ್ನು ಮಾನ್ಯ ಕುಲಪತಿಗಳ ಅನುಮೋದನೆಯಂತೆ, ಈ ಕೆಳಕಂಡ Specification ರೀತ್ಯಾ ಪ್ರವೇಶ ಪರೀಕ್ಷೆ ನಡೆಸಲಾಯಿತು.

| **PART - A** | | | |
|---|---|---|---|
| **Sl. No.** | **Subject** | **Questions** | **Marks** |
| 01. | Proficiency in English | 10 Questions | 10 X 2 = 20 |
| 02. | Mathematical Ability | 10 Questions | 10 X 2 = 20 |
| **PART - B** | | | |
| 01. | Test of Reasoning | 15 Questions | 15 X 2 = 30 |
| 02. | General Awareness | 15 Questions | 15 X 2 = 30 |
| | | **Total Marks** | **= 100** |

ಎಂ.ಬಿ.ಎ.ಗೆ ಪ್ರವೇಶಾತಿ ಪಡೆಯಲಿರುವ ವಿದ್ಯಾರ್ಥಿಗಳಿಗೆ, ಕರಾಮುವಿ ಪ್ರವೇಶಾತಿ ವಿಭಾಗದಿಂದ MBA CET ಪರೀಕ್ಷೆಯನ್ನು Online ಮೂಲಕ Registration Fee ರೂ. 1000/– ಗಳನ್ನು ಪಾವತಿಸಿಕೊಂಡು, ನಂತರ CET Questions ಗಳ Link ಅನ್ನು ವಿದ್ಯಾರ್ಥಿಗಳ Mail ID ಅಥವಾ Mobile Number ಗೆ ಪ್ರವೇಶಾತಿ ವಿಭಾಗದಿಂದ ನೀಡಿದ್ದು, ಅದರಂತೆ ಪ್ರವೇಶಾತಿ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ಈ Link ಮೂಲಕ CET Questionsಗೆ ಉತ್ತರವನ್ನು Online ಮೂಲಕವೇ ಉತ್ತರಿಸಿದ್ದು, ಸದರಿ ವಿದ್ಯಾರ್ಥಿಗಳು ಪಡೆದಿರುವ ಅಂಕಗಳ ಅನುಸಾರ ವಿದ್ಯಾರ್ಥಿಗಳನ್ನು ಪ್ರವೇಶಾತಿ ಮಾಡಿಕೊಳ್ಳಲಾಗಿದ್ದು, ಈ ಸಂಬಂಧ ಸದರಿ ವಿಷಯಕ್ಕೆ ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಅನುಸಮರ್ಥನೆಗಾಗಿ ವಿಷಯವನ್ನು ಮಂಡಿಸಲಾಗಿದೆ.

**ತೀರ್ಮಾನ : ಅನುಮೋದಿಸಲಾಯಿತು.**

*********

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 25.09**

**ವಿಷಯ: PPR ಗಳನ್ನು UGC-DEB Portal ಗೆ Upload ಮಾಡುವ ಬಗೆಗೆ.**

***********

ವಿಶ್ವವಿದ್ಯಾನಿಲಯದ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ Syllabus, SLMs ಹಾಗೂ PPR ಗಳನ್ನು UGC-DEB Portal ಗೆ Upload ಮಾಡುವ ಮೊದಲು CIQA ದಿಂದ ಪರಿಶೀಲಿಸಿ ಅನುಮೋದನೆ ಪಡೆಯುವುದು ಕಡ್ಡಾಯವಾಗಿದ್ದು, ಈ ಸಂಬಂಧ ವಿವಿಧ ಶೈಕ್ಷಣಿಕ ವಿಭಾಗಗಳಿಂದ ಸಲ್ಲಿಸಲಾಗಿರುವ PPR ಗಳನ್ನು CIQA ವತಿಯಿಂದ ಪರಿಶೀಲಿಸಲಾಗಿದ್ದು, ಪರಿಶೀಲಿಸಲಾಗಿರುವ Syllabus, SLMs ಹಾಗೂ PPR ಗಳನ್ನು CIQA ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆದು ನಡಾವಳಿಯನ್ನು ಸಲ್ಲಿಸಿರುತ್ತಾರೆ. ಸದರಿ ನಡಾವಳಿಯನ್ನು ಶೈಕ್ಷಣಿಕ ಮಂಡಳಿ ಸಭೆಗೆ ಮಂಡಿಸಿ UGC-DEB Portalಗೆ Upload ಮಾಡುವ ಸಂಬಂಧ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

**ಶೈಕ್ಷಣಿಕ ಕಾರ್ಯಕ್ರಮಗಳ ವಿವರ**

| | |
|---|---|
| **A. Under Graduate Programmes** | |
| 1 | Bachelor of Arts |
| 2 | Bachelor of Commerce |
| 3 | Bachelor of Library and Information Science |
| 4 | Bachelor of Science |
| 5 | Bachelor of Science – Information Technology |
| 6 | Bachelor of Science – Home Science |
| 8 | Bachelor of Computer Applications |
| 9 | Bachelor of Business Administration |
| 10 | Bachelor of Social Work |
| 11 | Bachelor Education |
| **B. Post Graduate Programmes** | |
| 12 | Master of Arts in Kannada |
| 13 | Master of Arts in English |
| 14 | Master of Arts in Hindi |
| 15 | Master of Arts in Urdu |
| 16 | Master of Arts in Sanskrit |
| 17 | Master of Arts in Telugu |
| 18 | Master of Arts in History |
| 19 | Master of Arts in Economics |
| 20 | Master of Arts in Political Science |
| 21 | Master of Arts in Public Administration |
| 22 | Master of Arts in Sociology |
| 23 | Master of Arts in Journalism and Mass Communication |
| 24 | Master of Arts in Ancient History & Archeology |
| 25 | Master of Arts in Education |
| 26 | Master of Arts in Anthropology |
| 27 | Master of Arts in Social Work |
| 28 | Masters of Tourism & Travel Management |
| 29 | Master of Science in Biochemistry |
| 30 | Master of Science in Biotechnology |

ಕುಲಸಚಿವರು ಕುಲಪತಿಗಳು

| | |
|---|---|
| 31 | Master of Science in Chemistry |
| 32 | Master of Science in Clinical Nutrition and Dietetics |
| 33 | Master of Science in Computer Science |
| 34 | Master of Science in Environmental Science |
| 35 | Master of Science in Geography |
| 36 | Master of Science in Mathematics |
| 37 | Master of Science in Microbiology |
| 38 | Master of Science in Physics |
| 39 | Master of Science in Psychology |
| 40 | Master of Science in Information Technology |
| 41 | Master of Science in Botany |
| 42 | Master of Science in Zoology |
| 43 | Master of Science in Food & Nutrition Science |
| 44 | Master of Science in Cyber Security |
| 45 | Master of Science in Earth Science |
| 46 | Master of Science in Bio informatics |
| 47 | Master of Science in Data Science |
| 48 | Master of Library and Information Science |
| 49 | Master of Commerce |
| 50 | Master of Business Administration |
| 51 | Master of Computer Application |

**ತೀರ್ಮಾನ:** ವಿಶ್ವವಿದ್ಯಾನಿಲಯದ ಕೆಳಕಂಡ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ Syllabus, SLMs ಹಾಗೂ PPR ಗಳನ್ನು UGC-DEB Portalಗೆ Upload **ಮಾಡಲು ಅನುಮೋದನೆ ನೀಡಲಾಯಿತು.**

*********

**Subject No: 25.10**

**Subject: Phemesoft in association with IBM submitted proposal regarding**

****

I. Business Analytics add-on course for MBA students
   A. Skill Training Programme on Business Analytics (Existing MBA Students)
   B. Skill Training Programme on Business Analytics (New MBA Students)

II. Skill Training on Certificate Programme on Business Analytics

As per the discussion of MBA Department Council members regarding the Programmes mentioned by phemesoft in association with IBM. The Department council has raised the opinion regarding further more clarification from Phemesoftware Pvt Ltd., in association with IBM.

**Regarding**

1. Fee Structure
2. Examination Modalities

ಕುಲಸಚಿವರು ಕುಲಪತಿಗಳು

From the above issues the Department Council felt that there is need for further discussion on this matters before finalizing / accepting the proposal. This matter phase before AC for further discussion and directions.

**ತೀರ್ಮಾನ: ವಿಷಯವನ್ನು ಅನುಮೋದಿಸಿ ಪ್ರೊ. ಮಹದೇವ ಮೂರ್ತಿ, ಪ್ರಾಧ್ಯಾಪಕರು, ನಿರ್ವಹಣಾಶಾಸ್ತ್ರ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ರವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಲಾಯಿತು.**

*********

**ವಿಷಯ ಸಂಖ್ಯೆ: 25.11**

**ವಿಷಯ** : Texial Innovations Pvt Ltd ರವರು ವಿವಿಗೆ ಸಲ್ಲಿಸಿರುವ Proposal ಬಗೆಗೆ.

*****

Texial Innovations Pvt Ltd ರವರು ವಿವಿಗೆ ಸಲ್ಲಿಸಿರುವ Proposal ಪ್ರಕಾರ, ಸದರಿಯವರು ಕರಾಮುವಿಯ ಜೊತೆಗೂಡಿ ವಿದ್ಯಾರ್ಥಿಗಳಿಗೆ ಉದ್ಯೋಗಕ್ಕೆ ಅನುಕೂಲವಾಗುವಂತಹ Certificate/Diploma Course ಗಳನ್ನು Cyber Security ಎಂಬ ವಿಷಯದ ಮೇಲೆ Value added Course ಗಳಾಗಿ ನಡೆಸಲು ಮುಂದೆ ಬಂದಿರುತ್ತಾರೆ.

ಸದರಿ Course ಗಳು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದ್ದು, Cyber Security ವಿಷಯದ ಮೇಲೆ Practical Knowledge ಹೆಚ್ಚಾಗುತ್ತದೆ, Employability ಯನ್ನು ಕೂಡ ಹೆಚ್ಚಿಸುವುದರಿಂದ Texial Innovations Pvt Ltd ರವರನ್ನು ELSC (Exclusive Learner Support Center) ಎಂದು ಪರಿಗಣಿಸಿ ಸದರಿಯವರೊಂದಿಗೆ ಒಡಂಬಡಿಕೆ ಮಾಡಿಕೊಂಡು Cyber Security ವಿಷಯದ Certificate/Diploma Course ಗಳನ್ನು ನಡೆಸುವುದರಿಂದ ವಿದ್ಯಾರ್ಥಿಗಳಿಗೆ ಉದ್ಯೋಗ ಪಡೆಯಲು ಅನುಕೂಲವಾಗುವುದು ಹಾಗೂ ಸದರಿ ಕಂಪನಿಯೊಂದಿಗೆ ವಿದ್ಯಾರ್ಥಿಗಳ Fees ನಲ್ಲಿ ಇಂತಿಷ್ಟು ಕರಾಮುವಿಗೆ ಎಂದು ಪರಿಗಣಿಸುವುದರಿಂದ ವಿವಿಗೆ ಆರ್ಥಿಕ ಆಧಾಯವಾಗುವುದೆಂಬ ಅಂಶವನ್ನು ಅವಗಾಹನೆಗೆ ತರುತ್ತಾ, ಸದರಿ ಸಂಸ್ಥೆಯನ್ನು ELSC ಎಂದು ಪರಿಗಣಿಸಲು ಪಾಲಿಸಬೇಕಾದ ನಿಯಮಗಳನ್ನು ಕೈಗೊಳ್ಳಲು ಹಾಗೂ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕೆ ಮಂಡಿಸಿದೆ.

**ತೀರ್ಮಾನ: ವಿಷಯವನ್ನು ಅನುಮೋದಿಸಿ ಡಾ. ಮಹೇಶ್ ಡಿ.ಎಂ, ಸಹಾಯಕ ಪ್ರಾಧ್ಯಾಪಕರು, ಕಂಪ್ಯೂಟರ್‌ಸೈನ್ಸ್ ವಿಭಾಗ, ರವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಲಾಯಿತು.**

*********

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 25.12**

ವಿಷಯ: Skills with Swathi ರವರು ವಿವಿಗೆ ಸಲ್ಲಿಸಿರುವ ಪ್ರಸ್ತಾವನೆ ಬಗೆಗೆ.

*****

Skills with Swathi ರವರು ವಿವಿಗೆ ಸಲ್ಲಿಸಿರುವ ಪ್ರಕಾರ ಸದರಿಯವರು ಕರಾಮುವಿಯ ಜೊತೆಗೂಡಿ ವಿದ್ಯಾರ್ಥಿಗಳಿಗೆ ಉದ್ಯೋಗಕ್ಕೆ ಅನುಕೂಲವಾಗುವಂತಹ Skill Development, Diploma, PG Diploma, Certificate Course ಗಳನ್ನು Communication and Soft Skills ಎಂಬ ಶೀರ್ಷಿಕೆಯಡಿಯಲ್ಲಿ Skill Development Course ನಡೆಸಲು ವಿವಿಯ ಸಹಮತ ಕೋರಿರುತ್ತಾರೆ, ಸದರಿ Course ನಲ್ಲಿ Language Lab ಎಂಬ Practical ವಿಷಯವನ್ನು ಅಳವಡಿಸಿಕೊಂಡಿರುತ್ತಾರೆ

ಸದರಿ Course ಗಳು ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದ್ದು, Employability ಯನ್ನು ಹೆಚ್ಚಿಸುವುದರಿಂದ Skills with Swathi Company ಯವರನ್ನು ELSC (Exclusive Learner Support Centre) ಎಂದು ಪರಿಗಣಿಸಿ, ಸದರಿಯವತೊಂದಿಗೆ ಒಡಂಬಡಿಕೆ, Skill Development Programme ಅನ್ನು ವಿವಿಯ ಮೂಲಕ ನಡೆಸುವುದರಿಂದ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ಹೆಚ್ಚುವುದು ಹಾಗೂ ಸದರಿ ಕಂಪನಿಯೊಂದಿಗೆ ವಿದ್ಯಾರ್ಥಿಗಳ Feesನಲ್ಲಿ ಇಂತಿಷ್ಟು ಕರಾಮುವಿಗೆ ಎಂದು ಶೇಕಡವಾರು ಪರಿಗಣಿಸುವುದರಿಂದ ವಿವಿಗೆ ಆರ್ಥಿಕ ಆದಾಯವಾಗುವುದೆಂಬ ಅಂಶವನ್ನು ಅವಗಾಹನೆಗೆ ತರುತ್ತಾ ಸದರಿ ಸಂಸ್ಥೆಯನ್ನು ELSC ಎಂದು ಪರಿಗಣಿಸಲು ಪಾಲಿಸಬೇಕಾದ ನಿಯಮಗಳನ್ನು ಕೈಗೊಳ್ಳಲು ಹಾಗೂ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಚರ್ಚೆ ಹಾಗೂ ನಿರ್ಣಯಕ್ಕೆ ವಿಷಯ ಮಂಡಿಸಿದೆ.

**ತೀರ್ಮಾನ: ವಿಷಯವನ್ನು ಅನುಮೋದಿಸಿ ಡಾ. ಮಹೇಶ್ ಡಿ.ಎಂ, ಸಹಾಯಕ ಪ್ರಾಧ್ಯಾಪಕರು, ಕಂಪ್ಯೂಟರ್‌ಸೈನ್ಸ್ ವಿಭಾಗ, ರವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಲಾಯಿತು.**

*********

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 25.13**

**ವಿಷಯ: ಅವಧಿ ಮೀರಿದ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳ ವಿದ್ಯಾರ್ಥಿಗಳಿಗೆ ಆಂತರಿಕ ನಿಬಂಧನೆ ಅಂಕಗಳು/ಪ್ರಾಯೋಗಿಕ ಅಂಕಗಳು ಹಾಗೂ ಓಪನ್ ಎಲೆಕ್ಟೀವ್‌ನ ಆಂತರಿಕ ಅಂಕಗಳನ್ನು ಸಲ್ಲಿಸುವ ಬಗ್ಗೆ ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳು, ಎಲ್ಲಾ ವಿಭಾಗದ ಮುಖ್ಯಸ್ಥರು ಹಾಗೂ ಪರೀಕ್ಷಾ ವಿಭಾಗದ ಅಧಿಕಾರಿ/ನೌಕರರುಗಳೊಂದಿಗೆ ನಡೆದ ಸಭಾ ನಡವಳಿಯನ್ನು ಅನುಷ್ಠಾನಗೊಳಿಸುವ ಕುರಿತು.**

*****

ವಿಶ್ವವಿದ್ಯಾನಿಲಯದ ಸ್ನಾತಕ/ಸ್ನಾತಕೋತ್ತರ ಕಾರ್ಯಕ್ರಮಗಳ ಅವಧಿ ಮೀರಿದ ವಿದ್ಯಾರ್ಥಿಗಳ ಆಂತರಿಕ ನಿಬಂಧನೆ ಅಂಕಗಳು/ಪ್ರಾಯೋಗಿಕ ಅಂಕಗಳು ಹಾಗೂ ಸ್ನಾತಕ ಕಾರ್ಯಕ್ರಮಗಳ ಓಪನ್ ಎಲೆಕ್ಟೀವ್‌ನ ಆಂತರಿಕ ಅಂಕಗಳನ್ನು ಸಕಾಲದಲ್ಲಿ ಸಲ್ಲಿಸದಿರುವ ಬಗ್ಗೆ ಮಾನ್ಯ ಕುಲಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:13.03.2023ರಂದು ಬೆಳಗ್ಗೆ 11.30ಕ್ಕೆ ಪರೀಕ್ಷಾ ವಿಭಾಗದಲ್ಲಿ ಅಧಿಕಾರಿಗಳು, ಎಲ್ಲಾ ವಿಭಾಗದ ಮುಖ್ಯಸ್ಥರು ಹಾಗೂ ಪರೀಕ್ಷಾ ವಿಭಾಗದ ಅಧಿಕಾರಿಗಳು/ನೌಕರರುಗಳೊಂದಿಗೆ ಸಭೆಯು ಜರುಗಿತು, ಈ ಸಭೆಯಲ್ಲಿ ಅಧಿಕಾರಿಗಳು ಎಲ್ಲಾ ವಿಭಾಗದ ಮುಖ್ಯಸ್ಥರು ಹಾಗು ನೌಕರರುಗಳು ಹಾಜರಿದ್ದು, ಈ ಸಭೆಯಲ್ಲಿ ಸಾಧಕ ಬಾಧಕಗಳನ್ನು ಚರ್ಚಿಸಿ ನಿರ್ಣಯ ಕೈಗೊಂಡಿರುವ ಸಭಾ ನಡವಳಿಯನ್ನು ಶೈಕ್ಷಣಿಕ ಮಂಡಳಿಗೆ ಶಿಫಾರಸ್ಸು ಮಾಡುವ ಸಂಬಂಧದಲ್ಲಿ ವಿಷಯ ಸಿದ್ಧಪಡಿಸಿ ಮಂಡಿಸಿದೆ.

**ತೀರ್ಮಾನ :**

1. **ಈ ಹಿಂದೆ ಆಂತರಿಕ ನಿಬಂಧನೆಗಳನ್ನು ಸಲ್ಲಿಸದಿರುವ ಸ್ನಾತಕ ಮತ್ತು ಸ್ನಾತಕೋತ್ತರ ಹಳೆಯ ವಿದ್ಯಾರ್ಥಿಗಳು ಆಂತರಿಕ ನಿಬಂಧನೆಗಳನ್ನು ಸಲ್ಲಿಸುವ ಬಗೆಗಿನ ದಿನಾಂಕ: 13.03.2023ರ ನಿರ್ಣಯದ ಬಗ್ಗೆ ಸಭೆಯಲ್ಲಿ ವಿವರವಾಗಿ ಚರ್ಚಿಸಿ ಮುಂದೆ ಉಂಟಾಗಬಹುದಾದ ಗೊಂದಲಗಳನ್ನು ಗಮನದಲ್ಲಿಟ್ಟುಕೊಂಡು ಅಂತಿಮವಾಗಿ ಅವಕಾಶ ನೀಡದಿರಲು ತೀರ್ಮಾನಿಸಲಾಯಿತು.**

2. **2022–23ರ ಜುಲೈ ಆವೃತ್ತಿ ನಂತರದಲ್ಲಿ ವಿವಿಧ ಶಿಕ್ಷಣ ಕ್ರಮಗಳಿಗೆ ಹೊಸದಾಗಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು ಕಾರಣಾಂತರಗಳಿಂದ ನಿಗಧಿತ ಅವಧಿಯೊಳಗಾಗಿ ಆಂತರಿಕ ನಿಬಂಧನೆಗಳನ್ನು ಸಲ್ಲಿಸಲು ವಿಫಲವಾಗಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಪರೀಕ್ಷಾ ಅಧಿಸೂಚನೆ ಪ್ರಕಟಿಸುವ ದಿನಾಂಕದವರೆವಿಗೂ ಆಂತರಿಕ ನಿಬಂಧನೆಗಳನ್ನು ಸಲ್ಲಿಸಲು ಅವಕಾಶ ನೀಡುವ ಬಗ್ಗೆ ಅನುಮೋದನೆ ನೀಡಲಾಯಿತು.**

*********

ಕುಲಸಚಿವರು ಕುಲಪತಿಗಳು

**ವಿಷಯ ಸಂಖ್ಯೆ: 25.14**

**ವಿಷಯ:** Universal Education ಸಹಯೋಗದೊಂದಿಗೆ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸುವ ಬಗ್ಗೆ.

*****

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕೌಶಲ್ಯಾಭಿವೃದ್ಧಿ ಘಟಕದ ವತಿಯಿಂದ ಒಂದು ಹೊಸ ಸರ್ಟಿಫಿಕೇಟ್ ಕೋರ್ಸ್ (ಒಂದು ವರ್ಷದ ಕೋರ್ಸ್) ಪ್ರಾರಂಭ ಮಾಡಲು Universal Education ಸಂಸ್ಥೆಯವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಕೋರ್ಸ್‌ಗೆ ಸಂಬಂಧ ಪಟ್ಟಂತೆ Syllabus (ಪಠ್ಯವಿಡಿ), ಪರೀಕ್ಷಾ ಮಾದರಿ, ಪ್ರಶ್ನೆ ಪತ್ರಿಕೆ ಮಾದರಿ ಮತ್ತು ವಿದ್ಯಾರ್ಥಿಗಳಿಗೆ ನೀಡಲ್ಪಡುವ ಸಿದ್ಧಪಾಠಗಳನ್ನು ಕೂಡ ಸದರಿ ಸಂಸ್ಥೆಯವರೇ ಒದಗಿಸುವುದರಿಂದ ಸದರಿ ವಿಷಯವನ್ನು ಶೈಕ್ಷಣಿಕ ಮಂಡಳಿಯ ಚರ್ಚೆ ಮತ್ತು ನಿರ್ಣಯಕ್ಕಾಗಿ ಮಂಡಿಸಿದೆ.

ತೀರ್ಮಾನ : **Universal Education ಸಹಯೋಗದೊಂದಿಗೆ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮೋದಿಸಲಾಯಿತು.**

*********

**ವಿಷಯ ಸಂಖ್ಯೆ: 25.10, 25.11, 25.12, ಮತ್ತು 25.14 ವಿಷಯಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪಿತ ವಿಷಯದ ಬಗ್ಗೆ ಸಂಬಂಧಪಟ್ಟ ಸಂಸ್ಥೆಗಳಿಂದ Presentation ಪಡೆದು ಯಾವುದೇ ವಿಷಯಗಳು ಪುನರಾವರ್ತನೆಯಾಗದಂತೆ ಖಾತರಿಪಡಿಸಿಕೊಳ್ಳುವುದು ಮತ್ತು ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಯಾವ ರೀತಿಯಲ್ಲಿ ಅನುಕೂಲವಾಗುವುದು ಎಂಬುದರ ಬಗ್ಗೆ ತಿಳಿದುಕೊಳ್ಳುವ ಸಲುವಾಗಿ ತಜ್ಞರ ಸಮಿತಿಯೊಂದನ್ನು ರಚಿಸುವುದು ಎಂಬುದಾಗಿ ಮಾನ್ಯ ಕುಲಪತಿಗಳು ಸೂಚಿಸಿದರು. ಮುಂದುವರೆದು ಮಾನ್ಯ ಹಣಕಾಸು ಅಧಿಕಾರಿಗಳು ಶುಲ್ಕವು ವಿದ್ಯಾರ್ಥಿಗಳಿಗೆ ಅನುಕೂಲವಾಗುವ ರೀತಿಯಲ್ಲಿದ್ದರೆ ಒಳ್ಳೆಯದು ಎಂಬುದರ ಬಗ್ಗೆ ತಿಳಿಸಿದರು.**

ಅಂತಿಮವಾಗಿ 25ನೇ ಶೈಕ್ಷಣಿಕ ಮಂಡಳಿ ವಿಶೇಷ ಸಭೆಗೆ ಆಗಮಿಸಿ, ಮಂಡಿತ ವಿಷಯದ ಬಗ್ಗೆ ಚರ್ಚಿಸಿ, ತಮ್ಮ ಅಮೂಲ್ಯ ಸಲಹೆ, ಸೂಚನೆಗಳನ್ನು ನೀಡಿ, ಸಭೆಯನ್ನು ಸುಸೂತ್ರವಾಗಿ ನಡೆಸಿಕೊಟ್ಟಿದ್ದಕ್ಕೆ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಕುಲಸಚಿವ (ಪರೀಕ್ಷಾಂಗ) ರವರು ಧನ್ಯವಾದಗಳನ್ನು ತಿಳಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು ಹಾಗು
ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಗು ಅಧ್ಯಕ್ಷರು